ಫಾತ್ಮಾ ಕ್ರೌಮಾ
ಕವಿತೆಗಳು

# ತಡವಾಗಿ ಎಚ್ಚರವಾಯಿತು

ಫೋಟೋದಲ್ಲಿ ನಾನು ಅವನಿಗೂ ತುಸು ಜಾಗ ಕೊಟ್ಟೆ
ತುಕ್ಕು ಹಿಡಿದ ಪೋಸ್ಟ್ ಬಾಕ್ಸಿನಲಿ ಸಂದೇಶದ ಕಾಗದ ಪತ್ರಗಳನ್ನಿಟ್ಟೆ
ಒಂಟಿ ಹೆಣ್ಣಿನ ಮೈಗಿಂತಲೂ ತಣ್ಣಗಾದ
ಅರ್ಧ ಕುಡಿದ ಕಾಫಿಯನ್ನ ಅವನಿಗಾಗಿ ಬಿಟ್ಟೆ

ಹಾಗಾದರೂ
ಬೆರಳ ಮಡಿಕೆಗಳಿಗೂ ಕಿರಿದಾದ ಅವನ ಹೃದಯದ ಮನೆಯಲ್ಲಿ
ನನ್ನ ಕೋಣೆ ಬೆಚ್ಚಗಿರಲೆಂದು
ಹಣ್ಣಿನೊಳಗಿನ ಹಣ್ಣಿನಂತೆ ನನ್ನ ಅವನು
ಅಲ್ಲಿ ಬಚ್ಚಿಡಲೆಂದು

ನಾನೋ ಗೊಂದಲಕ್ಕೆ ಅರ್ಥಕೊಟ್ಟು
ಶೂನ್ಯಕ್ಕೆ ಆತ್ಮವನ್ನೆ ಕೊಟ್ಟವಳು
ಮಾಯದ ಗಾಯಗಳಿಂದ ನಾನು ರೋದಿಸುವಾಗ
ಇಡಿಯಾಗಿ ನಾನು ಚೂರು ಚೂರಾದಾಗ
ಅವನು ನನಗೆ ಕೊಟ್ಟದ್ದು ಬರೀ ನಿಶ್ಚಲ ಕನಸುಗಳು

ಹುಚ್ಚಿಡಿದು ಕೊಳಕು ತುಂಬಿ
ಗಡಿಪಾರಾದ ಕಾಡು ಮೃಗದಂತೆ ನನ್ನಿಡಿ ಬದುಕು
ಬರೀ ದುಃಖದ ದೂಳು

ನನ್ನ ಒಳ ಉಡುಪಿನ ಮೇಲಿನ ರಕ್ತದ ಕಲೆಯಂತೆ
ಈ ಪ್ರೀತಿ ಅಳಿಸಲಾಗದ ಶಾಯಿ ಕಲೆ
ಅದಕ್ಕೆ ಇರಬೇಕು ನನಗೆ ಗೊತ್ತಿರುವ ಹಲವರು ಮೃಗಗಳಾದದ್ದು
ಅವರು ಕಾಲವೆಂಬ ಮಾಂತ್ರಿಕನೊಡನೆ ಕದನಕ್ಕಿಳಿದರು
ಅಂದಾಜಿಗೂ ಮೀರಿ ಬೆಲೆ ತೆತ್ತು
ಪ್ರೀತಿಯನ್ನ ತ್ಯಜಿಸಿದರು

ಆದರೂ ಕಾಲ ಮಿಂಚಿ ಹೋಗಿರಲಿಲ್ಲ
ಆದರೆ ಶುಭ ಸಮಾಚಾರ ಹೊತ್ತು ತರುವ
ಪಾರಿವಾಳದ ಕಣ್ಣೊಳಗಿನ ಕಾರುಣ್ಯ ಕೆಟ್ಟು ಹೋಗಿತ್ತು

